ದಿಃ05-09-2015ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ – ಎ ಎಂ ಕೆ ವಕೀಲರಿಂದ

ರಾಧ ಮಾರುತಿ ಮತ್ತು ರಾಜಣ್ಣ ನವರು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಮೂರು ಜನರು ಕರಾರು ಪತ್ರಕ್ಕೆ ರುಜು ಮಾಡಿರುತ್ತಾರೆ. ಸಾಕ್ಷಿ ಕ್ರಯದ ಕರಾರು ಪತ್ರವನ್ನು ಗುರುತಿಸಿದ್ದು ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿ ರಾಧಾ ರವರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-1(ಎ) ಯಿಂದ (ಇ) ವರೆಗೆ ಗುರುತಿಸಲಾಯಿತು. ಸಾಕ್ಷಿ ಮಾರುತಿ ರವರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-1(ಎಫ್) ಯಿಂದ (ಜೆ) ವರೆಗೆ ಗುರುತಿಸಲಾಯಿತು. ಸಾಕ್ಷಿ ರಾಜಣ್ಣ ರವರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-1(ಕೆ) ಯಿಂದ (ಓ) ವರೆಗೆ ಗುರುತಿಸಲಾಯಿತು. ನಿ.ಪಿ-1ಕ್ಕೆ ಸಾಕ್ಷಿದಾರರಾಗಿ ನಾಗರಾಜು ಗೌರಮ್ಮ ಆಂಜಿನಪ್ಪ ನಾಗರಾಜ್ ರವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಗಂಗಪ್ಪನವರು ಸಾಕ್ಷಿದಾರರಾಗಿ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ಸಾಕ್ಷಿ ಸಾಕ್ಷಿದಾರರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-1(ಪಿ) ಯಿಂದ (ಎಸ್) ವರೆಗೆ ಗುರುತಿಸಲಾಯಿತು. ಸಾಕ್ಷಿ ಪತ್ರ ಬರಹಗಾರರಾದ ಮುತ್ತೇಗೌಡ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ-1(ಟಿ) ಎಂದು ಗುರುತಿಸಲಾಯಿತು. ನಿ.ಪಿ-1 ನ್ನು ಮುತ್ತೇಗೌಡರು ಬರೆದಿರುತ್ತಾರೆ. ಸರ್ವೆ ನಂ.33 ರ ಎರಡು ಆರ್‌ಟಿಸಿಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-2 ಮತ್ತು 3 ಎಂದು ಗುರುತಿಸಲಾಯಿತು. ಪ್ರತಿವಾದಿಗಳಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-4 ಎಂದು, ಆರ್‌ಪಿಎಡಿ ರಶೀದಿಗಳನ್ನು ನಿ.ಪಿ-5 ರಿಂದ 7 ವರೆಗೆ ಗುರುತಿಸಲಾಯಿತು. ಆರ್‌ಪಿಎಡಿ ಸ್ವೀಕೃತಿಗಳನ್ನು ನಿ.ಪಿ-8 ರಿಂದ 10 ಎಂದು ಗುರುತಿಸಲಾಯಿತು. ಈರಮ್ಮನವರು ಪ್ರತಿವಾದಿಗಳಿಗೆ ಬರೆದುಕೊಟ್ಟಿರುವ ಒಂದು ಮರಣ ಶಾಸನವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಎದುರುದಾರರು ಗೈರು ಹಾಜರಿರುತ್ತಾರೆ ಹಾಗಾಗೀ ಪಾಟೀ ಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ,

ಸಿ ಜೆ ಕೊರಟಗೆರೆ.